


ಶ್ರೀ ಸತ್ಯಸಾಯಿ ಆರೋಗ್ಯ
ಮತ್ತು ಶಿಕ್ಷಣ ಸಂಸ್ಥೆ
ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್
ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ
ಹಾಗೂ
ಶ್ರೀ ರಾಮಕೃಷ್ಣ ಸೇವಾಶ್ರಮ
ಪಾವಗಡ, ತುಮಕೂರು ಜಿಲ್ಲೆ
ಇವರ ಸಹಭಾಗಿತ್ವದಲ್ಲಿ

---

# “ಸಾಯಿ ಶ್ಯೂರ್ ಪೌಷ್ಟಿಕ ಆರೋಗ್ಯ ಮಿಕ್ಸ್ ಯೋಜನೆ”

## ಉದ್ಘಾಟನಾ ಕಾರ್ಯಕ್ರಮ

## ಗರ್ಭಿಣಿಯರಿಗೆ ಹಾಗೂ 60000 ಸರ್ಕಾರಿ ಶಾಲಾ ಮಕ್ಕಳಿಗೆ

SRI SATHYA SAI HEALTH AND EDUCATION TRUST

SRI SATHYA SAI ANNAPOORNA
LET NO CHILD GO TO SCHOOL HUNGRY EVER

SRI SATHYA SAI
ANNAPOORNA
LET NO CHILD GO TO SCHOOL HUNGRY EVER



ಸದ್ಗುರು ಶ್ರೀ ಮಧುಸೂಧನ ಸಾಯಿ
ಸ್ಥಾಪಕ ಮತ್ತು ಟ್ರಸ್ಟಿ

# ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್

ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ ಒಂದು ದತ್ತಿ ಸಂಸ್ಥೆಯಾಗಿದ್ದು ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಗ್ರಾಮದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದೆ. 2015 ನವೆಂಬರ್ ತಿಂಗಳಲ್ಲಿ ಒಂದು ಸ್ವಯಂ ಸೇವಾ ಸಂಸ್ಥೆಯಾಗಿ ಆರಂಭಗೊಂಡ ಟ್ರಸ್ಟ್, ಆರಂಭಿಕವಾಗಿ ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳಿಗೆ ಹಾಗೂ ಸಮಾಜದ ಹಿಂದುಳಿದ ವರ್ಗದವರಿಗಾಗಿ ಪೌಷ್ಟಿಕ ಹಾಗೂ ಸಮತೋಲನ ಉಪಹಾರ ನೀಡುವ ಯೋಜನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಅಲ್ಲದೇ ಶಾಲಾ ಮಕ್ಕಳು ಮಾನವೀಯ ಕ್ಷಮತೆ ಮತ್ತು ಶೈಕ್ಷಣಿಕ ಸಾಮರ್ಥ್ಯವನ್ನು ಹೊಂದುವ ಮೂಲಕ ಸಮಗ್ರ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಯೋಜನೆಯನ್ನು ರೂಪಿಸುವಲ್ಲಿ ಸಹ ಮುಂದಡಿ ಇಟ್ಟಿದೆ.

ಈ ಸಂಸ್ಥೆಯ ಬಹು ಮುಖ್ಯವಾದ ಚಟುವಟಿಕೆಯಾಗಿ "ಅನ್ನಪೂರ್ಣ ಉಪಹಾರ ಯೋಜನೆ" ಅಡಿಯಲ್ಲಿ 600ಕ್ಕೂ ಹೆಚ್ಚು ಸ್ವಯಂಸೇವಕರು 17 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶದಲ್ಲಿ ಇರುವ 3000ಕ್ಕೂ ಹೆಚ್ಚು ಶಾಲೆಯ 2,50,000 ಮಕ್ಕಳಿಗೆ ಉಚಿತವಾಗಿ ಬೆಳಗಿನ ಪೌಷ್ಟಿಕ ಆಹಾರ ನೀಡುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ.

ಈ ಯೋಜನೆಯು ಶಾಲೆಗಳಿಂದ ಅಭೂತಪೂರ್ವ ಸ್ವಾಗತವನ್ನು ಪಡೆದಿದೆ. ಶಾಲೆಗಳಲ್ಲಿ ಹಾಜರಾತಿ ಹೆಚ್ಚಾಗಲು, ಮಕ್ಕಳ ಆರೋಗ್ಯ ಸುಧಾರಿಸಲು ಹಾಗೂ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗಲು ಕಾರಣವಾಗಿದೆ.

Divine Mother & Child
Health Program

# ದಿವ್ಯಮಾತೆ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವು

ಆರೋಗ್ಯವಂತ ಶಿಶುವಿನ ಜನನಕ್ಕೆ ಆರೋಗ್ಯವಂತ ತಾಯಿಯಿಂದ ಮಾತ್ರ ಸಾಧ್ಯವೆಂಬುವ ಹಿತದೃಷ್ಟಿಯಿಂದ ರೂಪಿತಗೊಂಡಿದೆ.

ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಭಾರತ ಸರ್ಕಾರವು ತಾಯಿ ಮತ್ತು ಮಕ್ಕಳ ಆರೋಗ್ಯವನ್ನು ಉತ್ತಮಗೊಳಿಸಲು ಹಲವಾರು ಕಾರ್ಯಕ್ರಮಗಳ ಮೂಲಕ ಶ್ರಮಿಸುತ್ತಿದೆ.

ತಾಯಿ ಮತ್ತು ಮಕ್ಕಳ ಆರೋಗ್ಯವು ದೇಶದ ಸಾಮಾಜಿಕ ಪರಿಸ್ಥಿತಿಯನ್ನು ಕೂಡ ಪ್ರತಿಬಿಂಬಿಸುತ್ತದೆ. ದಿವ್ಯಮಾತೆ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವು ತಾಯಿ ಮಕ್ಕಳ ಆರೋಗ್ಯ ಮತ್ತು ಪೋಷಣೆಯನ್ನು ಉತ್ತಮಗೊಳಿಸಲು ಮುಂದಾಗುತ್ತಿದೆ.

## ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ರವರ ದಿವ್ಯ ಆಶೀರ್ವಾದಗಳೊಂದಿಗೆ

ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್, ಶ್ರೀ ರಾಮಕೃಷ್ಣ ಸೇವಾಶ್ರಮ, ಪಾವಗಡ ಸಂಸ್ಥೆಗಳ ಸಹಯೋಗದಲ್ಲಿ ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕಿನ ಒಟ್ಟು 60000 ಮಕ್ಕಳಿಗೆ **"ಸಾಯಿ ಶ್ಯೂರ್" ಅನ್ನಪೂರ್ಣ ಪೌಷ್ಟಿಕ ಆರೋಗ್ಯ ಮಿಕ್ಸ್, ಪಾವಗಡ ತಾಲ್ಲೂಕಿನ ನಿಃಶ್ಯಕ್ತ ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ಮಿಕ್ಸ್ ಮತ್ತು 150 ಮಕ್ಕಳಿಗೆ ಬೆಳಗಿನ ಉಪಹಾರ ನೀಡುವ ಯೋಜನೆ"**ಯನ್ನು ಆರಂಭಿಸುತ್ತಿದೆ.

**ಉದ್ಘಾಟನಾ ಕಾರ್ಯಕ್ರಮ :**

ದಿನಾಂಕ: 06 ನವೆಂಬರ್, 2019ರ ಬುಧವಾರ, ಸಮಯ: ಮಧ್ಯಾಹ್ನ 2.30 ಕ್ಕೆ

ಸ್ಥಳ : ಎಸ್.ಎಸ್.ಕೆ. ರಂಗಮಂದಿರ, ಪಾವಗಡ

**ದಿವ್ಯ ಸಾನ್ನಿಧ್ಯ**

### ಶ್ರೀಮತ್ ಸ್ವಾಮಿ ಜಪಾನಂದಜೀ ಮಹಾರಾಜ್

ಅಧ್ಯಕ್ಷರು, ಶ್ರೀರಾಮಕೃಷ್ಣ ಸೇವಾಶ್ರಮ

ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರ, ಪಾವಗಡ

**ಉದ್ಘಾಟನೆ**

### ಶ್ರೀಯುತ ಎಸ್. ಸುರೇಶ್ ಕುಮಾರ್

ಸನ್ಮಾನ್ಯ ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಮತ್ತು ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ

## ಮುಖ್ಯ ಅತಿಥಿಗಳು

### ಶ್ರೀ ವೆಂಕಟರಮಣಪ್ಪ

ಮಾಜಿ ಸಚಿವರು ಮತ್ತು ಸನ್ಮಾನ್ಯ ಶಾಸಕರು

ಪಾವಗಡ ತಾಲ್ಲೂಕು

### ಶ್ರೀ ಟಿ.ಬಿ.ಜಯಚಂದ್ರ

ಮಾಜಿ ಸಚಿವರು

ಕರ್ನಾಟಕ ಸರ್ಕಾರ

### ಶ್ರೀ ಮುರಳೀಧರ ಹಾಲಪ್ಪ

ಮಾಜಿ ಅಧ್ಯಕ್ಷರು

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

### ಶ್ರೀಮತಿ ಶುಭಾ ಕಲ್ಯಾಣ್, ಭಾ.ಆ.ಸೇ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯಿತಿ, ತುಮಕೂರು

### ಶ್ರೀಮತಿ ತೇಜಸ್ವಿನಿ ಅನಂತಕುಮಾರ್

ಅಧ್ಯಕ್ಷರು

ಅದಮ್ಯ ಚೇತನ ಟ್ರಸ್ಟ್, ಬೆಂಗಳೂರು

## ಗೌರವಾನ್ವಿತ ಅತಿಥಿಗಳು

### ಡಾ.ಬಿ.ಆರ್. ಚಂದ್ರಿಕಾ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು

### ಶ್ರೀ ಎಂ. ರೇವಣ ಸಿದ್ದಪ್ಪ

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ

### ಶ್ರೀ ಬಿ.ಪಿ. ನಾಗರಾಜಪ್ಪ

ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯಿತಿ, ತುಮಕೂರು

### ಶ್ರೀ ಸಿದ್ದಗಂಗಯ್ಯ

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪಾವಗಡ

### ಶ್ರೀ ಕೆ.ಎನ್. ಹನುಮಂತರಾಯಪ್ಪ

ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಕಾರ್ಯಕ್ರಮ

ಪಾವಗಡ ತಾ.

### ಶ್ರೀ ಪವನ್ ಕುಮಾರ್ ರೆಡ್ಡಿ

ಬಿ.ಆರ್.ಸಿ.ಕೇಂದ್ರ, ಪಾವಗಡ

### ಶ್ರೀ ರಂಗಪ್ಪ

ಕ್ಷೇತ್ರ ಶಿಕ್ಷಣಾಧಿಕಾರಿಗಳು

ಮಧುಗಿರಿ

### ಶ್ರೀ ಗಂಗಾಧರ ವಿ

ಕ್ಷೇತ್ರ ಶಿಕ್ಷಣಾಧಿಕಾರಿಗಳು

ಕೊರಟಗೆರೆ

### ಶ್ರೀಮತಿ ಪದ್ಮಾವತಮ್ಮ

ಸಹಾಯಕ ನಿರ್ದೇಶಕರು,

ಅಕ್ಷರ ದಾಸೋಹ ಕಾರ್ಯಕ್ರಮ, ಮಧುಗಿರಿ ತಾ.

### ಶ್ರೀ ರಘು ಟಿ.ಆರ್.

ಸಹಾಯಕ ನಿರ್ದೇಶಕರು,

ಅಕ್ಷರ ದಾಸೋಹ ಕಾರ್ಯಕ್ರಮ, ಕೊರಟಗೆರೆ ತಾ.

### ಶ್ರೀ ಜಿ ಸುದೇಶ್ ಕುಮಾರ್

ಪುರಸಭಾ ಸದಸ್ಯರು ಮತ್ತು ಅಧ್ಯಕ್ಷರು,

ಶ್ರೀ ಆರ್ಯವೈಶ್ಯ ಕನ್ಯಕಾಪರಮೇಶ್ವರಿ ಸಂಘ, ಪಾವಗಡ

### ಶ್ರೀ ಎಂ.ಎಸ್. ನಾಗರಾಜು

ಸಂಯೋಜಕರು

ಸ್ವಾ.ವಿ.ಸಂ.ಗ್ರಾ.ಆ. ಕೇಂದ್ರ, ಪಾವಗಡ

**ಸರ್ವರಿಗೂ ಆದರದ ಸುಸ್ವಾಗತ**

## ಶ್ರೀ ರಾಮಕೃಷ್ಣ ಸೇವಾಶ್ರಮದ ಬಗ್ಗೆ :



ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ 1986ರಲ್ಲಿ ತಲೆದೋರಿದ್ದ ಭೀಕರ ಬರಗಾಲ ಪರಿಹಾರಕ್ಕಾಗಿ ಬಂದ ಶ್ರೀ ಸ್ವಾಮಿ ಜಪಾನಂದಜೀ ರವರು ನಂತರದಲ್ಲಿ ಪಾವಗಡದಲ್ಲಿ ಶ್ರೀರಾಮಕೃಷ್ಣ ಸೇವಾಶ್ರಮವನ್ನು ಸ್ಥಾಪಿಸಿದರು. ಪಾವಗಡ ತಾಲ್ಲೂಕು ಗಡಿ ಭಾಗದ ಹಿಂದುಳಿದ ತಾಲ್ಲೂಕು. ಈ ತಾಲ್ಲೂಕು ಆರೋಗ್ಯ ಕ್ಷೇತ್ರದಲ್ಲಿ ತುಂಬಾ ಹಿಂದುಳಿದಿತ್ತು. ಇದನ್ನು ಮನಗಂಡ ಸ್ವಾಮೀಜಿಯವರು 1992ರಲ್ಲಿ ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿ ತನ್ಮೂಲಕ ತಾಲ್ಲೂಕಿನಲ್ಲಿ ಕುಷ್ಠರೋಗ ನಿರ್ಮೂಲನ ಯೋಜನೆಯನ್ನು ಕಾರ್ಯರೂಪಕ್ಕೆ ತಂದು 3800ಕ್ಕೂ ಮಿಗಿಲಾದ ರೋಗಿಗಳನ್ನು ಪತ್ತೆ ಹಚ್ಚಿ ಔಷಧೋಪಚಾರ ನೀಡಿದ್ದು, ಕುಷ್ಠರೋಗ ಸಂಪೂರ್ಣ ಹತೋಟಿಗೆ ಬರಲು ಸಹಕಾರಿಯಾಯಿತು. ನಂತರದಲ್ಲಿ ಕ್ಷಯರೋಗ ನಿಯಂತ್ರಣ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು. ಈ ಯೋಜನೆಗಳು ಈಗಲೂ ಚಾಲ್ತಿಯಲ್ಲಿವೆ.  ಕ್ಷಯರೋಗ ನಿಯಂತ್ರಣ ಯೋಜನೆಯು ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿಯೇ ಪ್ರಸಿದ್ಧಿಯಾಗಿದ್ದು ಈವರೆವಿಗೆ 13500ಕ್ಕೂ ಮಿಗಿಲಾದ ರೋಗಿಗಳನ್ನು ಪತ್ತೆ ಹಚ್ಚಿ ಉಚಿತ ಔಷಧೋಪಚಾರವನ್ನು ನೀಡಲಾಗಿದೆ. ಗುಣಹೊಂದಿದ ಕುಷ್ಠರೋಗಿಗಳು, ಕ್ಷಯರೋಗಿಗಳು ಹಾಗೂ ಅಂಗವಿಕಲತೆಯಿಂದ ಬಳಲುತ್ತಿರುವ ಬಡ ಜನರಿಗೆ ಉಚಿತವಾಗಿ ವಾರಕ್ಕೊಮ್ಮೆ ಆಹಾರಧಾನ್ಯವನ್ನು ವಿತರಿಸಲಾಗುತ್ತಿದೆ.

ಸೇವಾಶ್ರಮದ ವತಿಯಿಂದ 9–8–1998ರಲ್ಲಿ ಸುಸಜ್ಜಿತ 50 ಹಾಸಿಗೆಗಳ ಆಸ್ಪತ್ರೆ ಕಟ್ಟಡವನ್ನು ಲೋಕಾರ್ಪಣೆಗೊಳಿಸಲಾಯಿತು.  ನಂತರ ಅತ್ಯಂತ ಪ್ರಮುಖವಾದ ಯೋಜನೆ ಅಂಧತ್ವ ನಿವಾರಣಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಇದರ ಫಲವಾಗಿ 2000ನೇ ಇಸವಿಯಲ್ಲಿ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ಇದರ ಮೂಲಕ ಇದುವರೆಗೆ 30000 ಕ್ಕೂ ಅಧಿಕ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಮತ್ತು ಕಣ್ಣಿಗೆ ಸಂಬಂಧಪಟ್ಟ ಇತರ ಶಸ್ತ್ರ ಚಿಕಿತ್ಸೆಗಳನ್ನು ನಡೆಸಲಾಗಿದೆ.

ಈ ಯೋಜನೆಗಳಲ್ಲದೆ ಪ್ರತಿ ಬೇಸಿಗೆಯಲ್ಲಿ ಬರಪರಿಹಾರ ಯೋಜನೆಯಡಿಯಲ್ಲಿ ಮೇವು ವಿತರಣೆ, ನೈಸರ್ಗಿಕ ವಿಕೋಪ ಉಂಟಾದಾಗ ಪರಿಹಾರ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ (ಗುಜರಾತ್ ಭೂಕಂಪ, ತಮಿಳುನಾಡಿನಲ್ಲಿ ಸುನಾಮಿ ಮತ್ತು ಚಂಡಮಾರುತ, ಕೇರಳದಲ್ಲಿ ಪ್ರವಾಹ ಮತ್ತು ಉತ್ತರ ಕರ್ನಾಟಕದಲ್ಲಿ ನೆರೆ ಪರಿಹಾರ).  ಪಾವಗಡ ಪಟ್ಟಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಕುಡಿಯುವ ನೀರಿನ ಸರಬರಾಜು ಮುಂತಾದ ಹಲವು ಜನೋಪಕಾರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಎಲ್ಲಾ ಜನೋಪಯೋಗಿ ಯೋಜನೆಗಳು ಇನ್ಫೋಸಿಸ್ ಫೌಂಡೇಷನ್ ರವರ ಪ್ರಾಯೋಜಕತ್ವದಲ್ಲಿ ನಡೆಯುತ್ತಿದೆ.

ಅಕ್ಟೋಬರ್ 2014ರಲ್ಲಿ ಶ್ರೀ ಶಾರದಾದೇವಿ ದೃಷ್ಟಿ ನಿರ್ವಹಣಾ ಸಂಸ್ಥೆಯನ್ನು ಸ್ಥಾಪಿಸಿ ಪಾವಗಡ ತಾಲ್ಲೂಕಿನ ದೃಷ್ಟಿ ದೋಷವುಳ್ಳ ಮಕ್ಕಳಿಗೆ ವಿದ್ಯಾಭ್ಯಾಸ, ದಾಸೋಹ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.  “ವಾತ್ಸಲ್ಯ ಸುಧಾ” ಯೋಜನೆಯಡಿಯಲ್ಲಿ ಸುಮಾರು 120 ಬಡ ಮಕ್ಕಳಿಗೆ ಬೆಳಗಿನ ಉಪಾಹಾರ ಯೋಜನೆಯನ್ನು ಜಾರಿಗೆ ತರಲಾಗಿದೆ. ಕೇವಲ ಉಪಾಹಾರ ನೀಡುವುದಲ್ಲದೆ ಮಕ್ಕಳಿಗೆ ಸಂಸ್ಕೃತಿ, ಪರಂಪರೆಯ ವಿಚಾರಧಾರೆಗಳನ್ನು ಪರಿಚಯಿಸಲಾಗುತ್ತಿದೆ. ಇದರೊಂದಿಗೆ ಯುವ ಜನತೆಗೆ ಸ್ವಾಮಿ ವಿವೇಕಾನಂದರ ವಿಚಾರಧಾರೆ ಹಾಗೂ ದೇಶಾಭಿಮಾನದ ಅರಿವನ್ನು ಮೂಡಿಸಲಾಗುತ್ತಿದೆ.



**ಶ್ರೀರಾಮಕೃಷ್ಣ ಸೇವಾಶ್ರಮ**

ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರ
ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಸ್ವಾಮಿ ವಿವೇಕಾನಂದ ನಗರ, ಪಾವಗಡ – 561 202
ದೂ.08136–244030 / 244716 email: swajapa@yahoo.com Website : www.vivekaseva.org.in

**ಸಮಸ್ತ ಲೋಕ ಸುಖಿನೋ ಭವಂತು**